# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 121 |
| ಸದಸ್ಯರ ಹೆಸರು | ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 10.07.2018 |
| ಉತ್ತರಿಸುವವರು | ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಮಂಡ್ಯ ನಗರಸಭೆ ವ್ಯಾಪ್ತಿಯಲ್ಲಿ ಬರುವ ವಾರ್ಡ್‌ಗಳಲ್ಲಿನ ತ್ಯಾಜ್ಯ ವಿಲೇವಾರಿ ಸಮರ್ಪಕವಾಗಿ ನಡೆಯದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಮಂಡ್ಯ ನಗರಸಭೆ ವ್ಯಾಪ್ತಿಯಲ್ಲಿ 35 ವಾರ್ಡ್‌ಗಳಿದ್ದು, ಸಮರ್ಪಕ ತ್ಯಾಜ್ಯ ವಿಲೇವಾರಿಗಾಗಿ ಈ ಕೆಳಕಂಡ ಕ್ರಮವಹಿಸಲಾಗಿದೆ.<br>• ನಗರಸಭೆ ವ್ಯಾಪ್ತಿಯಲ್ಲಿ ಪ್ರತಿ ನಿತ್ಯ ಸುಮಾರು 60 ಟನ್ ತ್ಯಾಜ್ಯ ಉತ್ಪಾದನೆಯಾಗುತ್ತಿದ್ದು, ಎಲ್ಲಾ 35 ವಾರ್ಡ್‌ಗಳಲ್ಲಿ 19 ಆಟೋಟಿಪ್ಪರ್‌ಗಳಿಂದ ಪ್ರಾಥಮಿಕ ಹಂತದ (ಮನೆ ಮನೆ ಕಸ) ತ್ಯಾಜ್ಯವನ್ನು ಸಂಗ್ರಹಿಸಲಾಗುತ್ತಿದೆ ಹಾಗೂ ಆಟೋಟಿಪ್ಪರ್‌ಗೆ ಮೈಕ್‌ಸಿಸ್ಟಂ ಅಳವಡಿಸಿ ಪ್ರಚಾರದ ಮೂಲಕ ಸಾರ್ವಜನಿಕರಿಗೆ ತ್ಯಾಜ್ಯ ವಿಂಗಡಣೆಗೆ ಪ್ರೋತ್ಸಾಹ ನೀಡಲಾಗುತ್ತಿದೆ. ನಗರಸಭೆಯ 5 ಸಂಖ್ಯೆ ಟ್ರ್ಯಾಕ್ಟರ್‌ಗಳು, 01 ಸಂಖ್ಯೆ ಟಿಪ್ಪರ್ ಹಾಗೂ 7 ಸಂಖ್ಯೆ ಗುತ್ತಿಗೆ ಟ್ರ್ಯಾಕ್ಟರ್‌ಗಳ ಮೂಲಕ ಬೀದಿ ಕಸವನ್ನು ಸಾಗಣೆ ಮಾಡಲಾಗುತ್ತಿದೆ.<br>• ತ್ಯಾಜ್ಯ ಸಂಸ್ಕರಣೆಗಾಗಿ ಕಾಳೇನಹಳ್ಳಿ ಬಳಿ 24 ಎಕರೆ ಪ್ರದೇಶವನ್ನು ಅಭಿವೃದ್ಧಿಪಡಿಸಿದೆ. ಸುತ್ತಲೂ ಕಾಂಪೌಂಡ್ ವಾಲ್, ಶೆಡ್, Vermi composting pits, ವಿಂಡ್ರೋ ಪ್ಲಾಟ್‌ಫಾರಂ ಹಾಗು SLF ನಿರ್ಮಾಣ ಮಾಡಲಾಗಿದೆ.<br>• ಸಾಮಾನ್ಯ ಜನರಿಗೆ ತ್ಯಾಜ್ಯನಿರ್ವಹಣೆ ಬಗ್ಗೆ ಅರಿವು ಮೂಡಿಸಲು ವಾರ್ಡ್ ಸಭೆ, ಆಟೋಪ್ರಚಾರ, ಕರಪತ್ರ ಹಂಚುವಿಕೆ, ಶಾಲಾ ವಿದ್ಯಾರ್ಥಿಗಳಿಂದ ಜಾಥ, ಡ್ರಾಯಿಂಗ್ ಸ್ಪರ್ಧೆ ಏರ್ಪಡಿಸಿ ಅರಿವು ಮೂಡಿಸಲಾಗುತ್ತಿದೆ.<br>• ಮಂಡ್ಯ ನಗರಕ್ಕೆ ಸಂಬಂಧಪಟ್ಟಂತೆ ಶ್ರೀ.ಶ್ರೀ.ಶ್ರೀ.ನಿರ್ಮಲಾನಂದನಾಥ ಮಹಾಸ್ವಾಮೀಜಿಯವರನ್ನು ಸ್ವಚ್ಛ ಭಾರತ್ ಮಿಷನ್‌ನ ಬ್ರಾಂಡ್ ಅಂಬಾಸಿಡರ್‌ರನ್ನಾಗಿ ನೇಮಿಸಿಕೊಳ್ಳಲಾಗಿರುತ್ತದೆ. |
| (ಆ) | ತ್ಯಾಜ್ಯ ವಿಲೇವಾರಿ ನಿರ್ವಹಣೆಗಾಗಿ ಅನುಮೋದನೆಗೊಂಡ ಹುದ್ದೆಗಳೆಷ್ಟು; ಆ ಪೈಕಿ ಖಾಲಿ ಹುದ್ದೆಗಳೆಷ್ಟು; (ವಿವರ ನೀಡುವುದು) | • ಮಂಡ್ಯ ನಗರಸಭೆ ಜಿಲ್ಲೆಯಲ್ಲಿ ತ್ಯಾಜ್ಯ ವಿಲೇವಾರಿ ನಿರ್ವಹಣೆಗಾಗಿ 700 ಜನಸಂಖ್ಯೆಗೆ ಒಬ್ಬ ಪೌರಕಾರ್ಮಿಕರಂತೆ ಅನುಮೋದನೆಗೊಂಡ ಭರ್ತಿಯಾದ ಹಾಗೂ ಖಾಲಿ ಇರುವ ಹುದ್ದೆಗಳ ವಿವರಗಳು ಈ ಕೆಳಗಿನಂತಿವೆ. |

| ಮಂಜೂರಾದ ಹುದ್ದೆಗಳು | | | ಭರ್ತಿಯಾದ ಹುದ್ದೆಗಳು | | | ಖಾಲಿ ಇರುವ ಹುದ್ದೆಗಳು | | |
|---|---|---|---|---|---|---|---|---|
| ನೇ.ನೇ | ಹೊ.ಗು | ಒಟ್ಟು | ನೇ.ನೇ | ಹೊ.ಗು. | ಒಟ್ಟು | ನೇ.ನೇ | ಹೊ.ಗು | ಒಟ್ಟು |
| 102 | 101 | 203 | 71 | 185 | 256 | 31 | 0 | 31 |

| | | |
|---|---|---|
| (ಇ) | ಈ ಖಾಲಿ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು; | • ಕರ್ನಾಟಕ ಪುರಸಭೆಗಳ (ಪೌರ ಕಾರ್ಮಿಕರ ನೇಮಕಾತಿ) ವಿಶೇಷ ನಿಯಮಗಳ ರೀತ್ಯಾ ನೇಮಕಾತಿ ಮಾಡಿಕೊಳ್ಳಲು ಸರ್ಕಾರದ ನಿರ್ದೇಶನದಂತೆ, ಜಿಲ್ಲಾಧಿಕಾರಿಗಳ ಕಛೇರಿಯಿಂದ ಎಂಯುಎನ್(1) ವಿವ/154/2017-18 ದಿನಾಂಕ:23-02-2018ರಂದು ನೇಮಕಾತಿ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ. ಅರ್ಜಿಗಳನ್ನು ಸ್ವೀಕರಿಸಿದ್ದು, ಅರ್ಜಿಗಳ ಪರಿಶೀಲನೆ ನಡೆಸಲಾಗುತ್ತಿದ್ದು, ಶೀಘ್ರವಾಗಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸಲಾಗುತ್ತಿದೆ. ಹೊರಗುತ್ತಿಗೆ ಹುದ್ದೆಗಳಿಗೆ ನೇರ ಪಾವತಿಗೆ ಕ್ರಮವಹಿಸಲಾಗಿರುತ್ತದೆ. |
| (ಈ) | ಒಣ ಮತ್ತು ದ್ರವ ತ್ಯಾಜ್ಯಗಳನ್ನು ವಿಂಗಡಿಸಿ ಮಂಡ್ಯ ನಗರ ವ್ಯಾಪ್ತಿಯಲ್ಲಿ ವೈಜ್ಞಾನಿಕವಾಗಿ ಮತ್ತು ಸಮರ್ಪಕವಾಗಿ ತ್ಯಾಜ್ಯ ವಿಲೇವಾರಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು? | • ಸ್ವಚ್ಛ ಭಾರತ ಮಿಷನ್ ಅಡಿ ಸಮಗ್ರ ತ್ಯಾಜ್ಯ ನಿರ್ವಹಣೆಗಾಗಿ ವಿಸ್ತೃತ ಯೋಜನಾ ವರದಿಯನ್ನು ಸಿದ್ದಪಡಿಸಿ, ರಾಜ್ಯ ಉನ್ನತಾಧಿಕಾರಿಗಳ ಸಮಿತಿ ಸಭೆಯ ಅನುಮೋದನೆ ಪಡೆದುಕೊಳ್ಳಲಾಗಿರುತ್ತದೆ.<br><br>• ಮಂಡ್ಯ ನಗರಸಭಾ ವ್ಯಾಪ್ತಿಯಲ್ಲಿ ಮೂಲದಲ್ಲಿಯೆ ಹಸಿ ಮತ್ತು ಒಣ ತ್ಯಾಜ್ಯ ವಿಂಗಡಿಸಲು ಸಾಮಾನ್ಯ ಜನರಿಗೆ ಉತ್ತೇಜನ ನೀಡಲಾಗಿದೆ. ಪ್ರಸ್ತುತ 19 ಸಂಖ್ಯೆ ಆಟೋಟಿಪ್ಪರ್‌ಗಳ ಮೂಲಕ ತ್ಯಾಜ್ಯನ್ನು ಸಂಗ್ರಹಿಸಲಾಗುತ್ತಿದೆ. ಪ್ರತಿ ಮನೆಗಳಿಂದ ಸಂಗ್ರಹವಾಗುವ ತ್ಯಾಜ್ಯವನ್ನು ಸಾಧ್ಯವಾದಷ್ಟರ ಮಟ್ಟಿಗೆ ಬೇರ್ಪಡಿಸಿ ಸಂಗ್ರಹಿಸಲು ಪೌರಕಾರ್ಮಿಕರಿಗೆ ಪ್ರೋತ್ಸಾಹಿಸಲಾಗಿದೆ. ಜೊತೆಗೆ ವಾರ್ಡ್‌ನಂ:2 ರಲ್ಲಿ **"ಒಣ ತ್ಯಾಜ್ಯ ಸಂಗ್ರಹಣ ಕೇಂದ್ರ"**ವಿದ್ದು, ಮೇಲುಕೋಟೆ ರಸ್ತೆಯ ಸ್ಮಶಾನದ ಬಳಿ 3 ಟನ್ ಸಾಮರ್ಥ್ಯದ **"ಶೂನ್ಯ ತ್ಯಾಜ್ಯ ನಿರ್ವಹಣ ಘಟಕ"**ವನ್ನು ಆರಂಭಿಸಿ ವೈಜ್ಞಾನಿಕವಾಗಿ ತ್ಯಾಜ್ಯ ವಿಲೇವಾರಿ ಮಾಡಲು ಕ್ರಮವಹಿಸಲಾಗಿರುತ್ತದೆ. |

ಸಂಖ್ಯೆ: ನಅಇ 148 ಜಿಇಎಲ್ 2018

(ರಮೇಶ್ ಲ. ಜಾರಕೀಹೊಳಿ)
ಪೌರಾಡಳಿತ, ಸ್ಥಳೀಯ ಸಂಸ್ಥೆಗಳು,
ಹಾಗೂ ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು.